**OS.No**.66/2023 **PW**-1

**ದಿನಾಂಕಃ 03.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲು 1 ಮತ್ತು 2ನೇ ಪ್ರತಿವಾದಿಗಳ ಶ್ರೀ. ಎಂ.ಕೆ.ಎನ್. ವಕೀಲರಿಂದಃ**

ಈಗ ಒಂದು ತಿಂಗಳ ಹಿಂದೆ ಹಳ್ಳಿಮೈಸೂರು ಪೊಲೀಸರು ಮಾಯಗೌಡನಹಳ್ಳಿಗೆ ಬಂದು ನನ್ನ ತಂದೆ ಬದುಕಿದ್ದಾರೆ ಎಂದು ಹೇಳಿ ಮಾಯಗೌಡನಹಳ್ಳಿಯಲ್ಲಿ ಮತ್ತು ಪೊಲೀಸ್ ಠಾಣೆಯಲ್ಲಿ ಮಹಜರ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮಹಜರ್ ಮಾಡಿದ ಪೋಟೋಗಳನ್ನು ಹಳ್ಳಿಮೈಸೂರು ಪೋಲಿಸರು ನನ್ನ ಮೊಬೈಲ್ ಗೆ ಕಳುಹಿಸಿ ನಿಮ್ಮ ತಂದೆಯನ್ನು ಕರೆದುಕೊಂಡು ಹೋಗಬಹುದು ಎಂದು ನನಗೆ ಹೇಳಿದ್ದರು ಎಂದರೆ ಸರಿಯಲ್ಲ. ಸುಮಾರು ವರ್ಷಗಳಿಂದ ನನ್ನ ಮಕ್ಕಳು ನನಗೆ ಊಟ, ಬಟ್ಟೆ ಕೊಡದೇ ಹೊರಗೆ ಹಾಕಿದ್ದಾರೆ ಎಂದು ಪೊಲೀಸರ ಮುಂದೆ ನನ್ನ ತಂದೆ ಹೇಳಿಕೆಯನ್ನೂ ಸಹಾ ಕೊಟ್ಟಿದ್ದರು ಎಂದರೆ ಸರಿಯಲ್ಲ. ಈ ವಿಷಯವನ್ನು ಪೊಲೀಸರು ನನಗೆ ತಿಳಿಸಿದ್ದರೂ ಸಹಾ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನೀವು ಕೊಟ್ಟಂತಹ ಮಿಸಿಂಗ್ ದೂರಿನ ಬಗ್ಗೆ ಪೊಲೀಸರನ್ನು ಕೇಳಿರುತ್ತೀರಾ ಎಂದರೆ ಸಾಕ್ಷಿ ಕೇಳಿದ್ದೆ, ಅವರು ನನ್ನ ತಂದೆ ಬಂದಿದ್ದರು ಆದರೆ ನಮ್ಮ ಕೈಗೆ ಸಿಕ್ಕಿಲ್ಲ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ಸಿಕ್ಕಿದ್ದರಿಂದ ಹಳ್ಳಿಮೈಸೂರು ಪೊಲೀಸ್ ಠಾಣೆ ಸಿ.ಆರ್.ನಂ.117/2023 ರ ಪ್ರಕರಣವು ಮುಕ್ತಾಯವಾಗಿರುತ್ತದೆ ಎಂದರೆ ಸಾಕ್ಷಿ ನನ್ನ ತಂದೆ ಸಿಕ್ಕಿರುವುದಿಲ್ಲವೆಂದು ನುಡಿಯುತ್ತಾರೆ. ನಿಪಿ.1 ವಂಶವೃಕ್ಷವನ್ನು ನಾವೇ ಹೇಳಿ ಬರೆಸಿ

ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಹೌದು. ನನ್ನ ಅಜ್ಜಿ ನಿಂಗಾಜಮ್ಮ ಬದುಕಿದ್ದಾರೆ, ನನ್ನ ಅಜ್ಜ ಮಾದಪ್ಪ ತೀರಿಕೊಂಡಿರುತ್ತಾರೆ. ನನ್ನ ಅಜ್ಜ ಮಾದಪ್ಪರವರು ತೀರಿಕೊಂಡು 16 ವರ್ಷಗಳ ಮೆಲೆ ಆಗಿರುತ್ತದೆ, ಆದರೆ ದಿನಾಂಕ ನೆನಪಿಲ್ಲ. ಈ ಪ್ರಕರಣದಲ್ಲಿ ನಾನು ನನ್ನ ಅಜ್ಜಿ ನಿಂಗಾಜಮ್ಮ ರವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ. ನಿಪಿ.1 ರಲ್ಲಿ ಮಾದಪ್ಪರವರಿಗೆ 5 ಜನ ಮಕ್ಕಳಿದ್ದು, ಅದರಲ್ಲಿ ಎರಡು ಜನ ಹೆಣ್ಣು ಮಕ್ಕಳು ಇದ್ದು ಅವರ ಪೈಕಿ ಒಬ್ಬರು ತೀರಿಕೊಂಡಿರುತ್ತಾರೆ ಎಂದು ತೋರಿಸಿದ್ದು, ಅವರ ವಾರಸುದಾರರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೀರಾ ಎಂದರೆ ಸಾಕ್ಷಿ ಪ್ರದೀಪ ತೀರಿಕೊಡಿದ್ದು, ರೂಪ ಇರುತ್ತಾರೆ, ಆದರೆ ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದು ನುಡಿಯುತ್ತಾರೆ. ನಂಜಾಮಣಿ ತೀರಿಕೊಂಡಿದ್ದು, ಅವರಿಗೆ ಇಬ್ಬರು ಮಕ್ಕಳಿದ್ದು, ಅವರ ಪೈಕಿ ಹಿರಿಯ ಮಗ ಅಭಿನಂದನ್ ತೀರಿಕೊಂಡಿದ್ದು, ಇನ್ನೊಬ್ಬ ಅವಿನಂದನ್ ಜೀವಂತ ಇದ್ದಾರೆ, ಅವರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ನಿಪಿ.1 ರಲ್ಲಿ ತೋರಿಸಿರುವ ಗಿರೀಶ್ ರವರನ್ನು ಬದುಕಿದ್ದಾರೆ ಎಂದು ತೋರಿಸಿದ್ದೀರಾ ಎಂದರೆ ಸಾಕ್ಷಿ ಮಿಸಿಂಗ್ ಆಗಿರುತ್ತಾರೆ ಎಂದು ನುಡಿಯುತ್ತಾರೆ. ಏಕೆ ಅವರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ಅವರು ಸಿಗದೇ ಇರುವುದರಿಂದ ಮಾಡಿಲ್ಲ ಎಂದು ನುಡಿಯುತ್ತಾರೆ.

ನನಗೆ ಬುದ್ದಿ ಬಂದಾಗಿನಿಂದಲೂ ಮಾಯಗೌಡನಳ್ಳಿಗೆ ನಾನು ಆಗಾಗ ಹೋಗಿ ಬರುತ್ತಿದ್ದೇನೆ ಮತ್ತು ಜಮೀನನ್ನು ನೋಡಿಕೊಳ್ಳುತ್ತಿದ್ದೇನೆ. ನಮ್ಮ ಅಜ್ಜ ಮಾದಪ್ಪರವರಿಗೆ ಮಾಯಗೌಡನಹಳ್ಳಿ ಗ್ರಾಮದ ಸ.ನ.73/1 ರಲ್ಲಿ ಎಷ್ಟು ಆಸ್ತಿ ಇತ್ತು ಎಂದು ನನಗೆ ಗೊತ್ತಿಲ್ಲ. ಸ.ನಂ.73/1 ಅನ್ನು

ಹೊರತುಪಡಿಸಿ ಮಾದಪ್ಪರವರಿಗೆ ಪಿತ್ರಾರ್ಜಿತವಾಗಿ ಬೇರೆ ಯಾವುದೇ ಆಸ್ತಿಗಳು ಇಲಿಲ್ಲ ಎಂದರೆ ಸಾಕ್ಷಿ ಇವೆ, ಅವುಗಳನ್ನು ನಮ್ಮ ದೊಡ್ಡಪ್ಪ ಮತ್ತು ಚಿಕ್ಕಪ್ಪಂದಿರು ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಮಾದಪ್ಪರವರ ಹೆಸರಿಗೆ ಒಟ್ಟು ಎಷ್ಟು ಆಸ್ತಿಗಳು ಇದ್ದವು ಎಂದು ನಿಮಗೆ ಗೊತ್ತಾ ಎಂದರೆ ಸಾಕ್ಷಿ ನನಗೆ ಯಾರು ತೋರಿಸಿಲ್ಲ, ಹೀಗಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಯಾವ ಅಸ್ತಿಗಳು ಯಾರ ಯಾರ ಹೆಸರಿನಲ್ಲಿವೆ ಎಂದು ನೀವೇನಾದರೂ ದಾಖಲಾತಿಗಳನ್ನು ನೊಡೀರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಪಿತ್ರಾರ್ಜಿತ ಆಸ್ತಿಯಲ್ಲಿ ಭಾಗ ಬೇಕು ಎಂದು ನೀವೇನಾದರೂ ನಿಮ್ಮ ತಂದೆಯನ್ನು ಕೇಳಿರುತಿತೀರಾ ಎಂದರೆ ಸಾಕ್ಷಿ ಅವರು ನನಗೆ ಸಿಕ್ಕೇ ಇಲ್ಲ, ಹೀಗಾಗಿ ಕೇಳಿಲ್ಲ ಎಂದು ನುಡಿಯುತ್ತಾರೆ. ನಮ್ಮ ಅಜ್ಜ ಮಾದವಪ್ಪನವರು ಬದುಕಿದ್ದ ಕಾಲದಲ್ಲಿಯೇ ನಮ್ಮ ತಂದೆ, ಚಿಕ್ಕಪ್ಪ ಮತ್ತು ದೊಡ್ಡಪ್ಪಂದಿರು ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ನಮ್ಮ ಅಜ್ಜ ಮಾದಪ್ಪರವರ ಕಾಲದಲ್ಲಿಯೇ ನನ್ನ ತಂದೆ ವಿಭಾಗದಲ್ಲಿ ಭಾಗವಹಿಸಿ ವಿಭಾಗ ಮಾಡಿಕೊಂಡ ಆಸ್ತಿಗಳ ಬಗ್ಗೆ ತಮ್ಮ ಒಪ್ಪಿಗೆಯನ್ನೂ ಸಹಾ ಸೂಚಿಸಿ ನನ್ನ ತಂದೆ ವಿಭಾಗ ಪತ್ರಕ್ಕೆ ಸಹಿಯನ್ನೂ ಸಹಾ ಹಾಕಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಆ ವಿಚಾರಗಳು ಗೊತ್ತಿಲ್ಲಎಂದು ನುಡಿಯುತ್ತಾರೆ.

ನನ್ನ ಅಜ್ಜ ಮಾದಪ್ಪರವರಿಗೆ ಮಾಯಗೌಡನಹಳ್ಳಿ ಗ್ರಾಮದಲ್ಲಿ 2 ಎಕರೆ 13 ಗುಂಟೆ ಜಮೀನು ಹಾಗೂ ಒಂದು ಮನೆ ಇತ್ತು ಎಂದರೆ ಗೊತ್ತಿಲ್ಲ. ದಿಃ 28.02.1996 ರಂದು ಮೊದಲನೇ ಮಗ ಸೋಮಶೇಖರನಿಗೆ 26 ಗುಂಟೆ, 2ನೇ ಮಗ ಗಿರೀಶನಿಗೆ 26 ಗುಂಟೆ, 3ನೇ

ಮಗ ರೇವಣ್ಣನಿಗೆ 26 ಗುಂಟೆ ಮತ್ತು ತಮ್ಮ ಜೀವನಾಂಶಕ್ಕಾಗಿ 15 ಗುಂಟೆ ಆಸ್ತಿಯನ್ನು ನನ್ನ ಅಜ್ಜ ಇಟ್ಟುಕೊಂಡು ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಈ ರೀತಿ ನನ್ನ ತಂದೆ 26 ಗುಂಟೆ ಬಿಟ್ಟಿದ್ದೇವು ಎಂದು ಇತ್ತೀಚೆಗೆ ನನಗೆ ಹೇಳಿರುತ್ತಾರೆ, ಆದರೆ ನನಗೆ ಯಾವುದೇ ಆಸ್ತಿಯನ್ನು ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ನನ್ನ ಅಜ್ಜ ಮಾದಪ್ಪ ರವರ ಮರಣದ ನಂತರ ಮೂರು ಮಕ್ಕಳು ತಲಾ 5 ಗುಂಟೆಯಂತೆ ಹಂಚಿಕೊಂಡು ಪ್ರತಿಯೊಬ್ಬರು 31 ಗುಂಟೆ ಆಸ್ತಿಯನ್ನು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಭಾಗದಂತೆ ನಿಪಿ.2 ರಲ್ಲಿ ನನ್ನ ದೊಡ್ಡಪ್ಪನಿಗೆ 31 ಗುಂಟೆ, ನನ್ನ ಚಿಕ್ಕಪ್ಪನಿಗೆ 31 ಗುಂಟೆ ಬಂದಿದ್ದು, ನನ್ನ ತಂದೆಯ ಆಸ್ತಿ ಸರ್ಕಾರಿ ಬೀಳಾಗಿ ದಾಖಲಾಗಿರುತ್ತದೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

ಸುಮಾರು 20 ವರ್ಷಗಳಿಂದ ನಾನು ಬೇರೆ ಹೋಗಿದ್ದೆವು. ಮಾಯಗೌಡನಹಳ್ಳಿಗೆ ನಾನು ಆಗಾಗ ಹೋಗಿ ಬರುತ್ತೇನೆ, ಅಲ್ಲಿ ನನ್ನ ಅಜ್ಜಿ ಇರುತ್ತಾರೆ. ನಮಗೆ ಕೊಟ್ಟ ಮನೆಯಲ್ಲಿ ಒಂದು ಭಾಗದಲ್ಲಿ ನನ್ನ ಅಜ್ಜಿ ಇರುತ್ತಾರೆ. ವಿಭಾಗದ ಪ್ರಕಾರ ನನ್ನ ಅಜ್ಜನ ಮರಣದ ನಂತರ ನನ್ನ ದೊಡ್ಡಪ್ಪ ಮತ್ತು ಚಿಕ್ಕಪ್ಪ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಹೌದು. ಈ ವಿಷಯ ನನಗೆ ಸುಮಾರು 20 ವಶಷಗಳ ಹಿಂದೆ ಗೊತ್ತಿತ್ತು ಎಂದರೆ ಸಾಕ್ಷಿ 2001-2002ನೇ ಇಸವಿಯಲ್ಲಿ ನಾನು 10 ವರ್ಷದ ಬಾಲಕನಾಗಿದ್ದೆ, ಹೀಗಾಗಿ ನನಗೆ ಏನೂ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ತಂದೆಗೆ ಖಾತೆಯಾಗಿರುವ ವಿಷಯ ಗೊತ್ತಿತ್ತು ಎಂದರೆ ಸಾಕ್ಷಿ ಅವರು ಸಿಕ್ಕಿಲ್ಲದೇ ಇರುವುದರಿಂದ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಜಮೀನಿನ ಉತ್ಪನ್ನವನ್ನು ನಿಮ್ಮ ತಂದೆ ತೆಗೆದುಕೊಂಡು ಹೋದ ಬಗ್ಗೆ ನಿಮಗೇನಾದರೂ ಗೊತ್ತಾ ಎಂದರೆ ಸಾಕ್ಷಿ ಅವರ ಹೆಸರಿಗೆ ಖಾತೆಯನ್ನೇ ಮಾಡಿಕೊಟ್ಟಿಲ್ಲ, ಹೀಗಾಗಿ ಆ ವಿಷಯಗಳು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಅಜ್ಜ ಮಾದಪ್ಪರವರು ಬದುಕಿದ್ದಾಗಲೇ ನನ್ನ ತಂದೆ, ದೊಡ್ಡಪ್ಪ ಮತ್ತು ಚಿಕ್ಕಪ್ಪರವರು ಬೇರೆ ಬೇರೆಯಾಗಿ ವಾಸಿಸುತ್ತಿದ್ದರು ಎಂದರೆ ಹೌದು. ನನ್ನ ಅಜ್ಜ ಮಾದಪ್ಪನ ಕಾಲದಿಂದಲೇ ನನ್ನ ತಂದೆ, ದೊಡ್ಡಪ್ಪ, ಚಿಕ್ಕಪ್ಪಂದಿರು ಬೇರೆ ಬೇರೆಯಾಗಿ ವಾಸವಾಗಿದ್ದರಿಂದ ಅವಿಭಕ್ತ ಕುಟುಂಬದಲ್ಲಿ ಯಾರು  ಸಹಾ ಇರಲಿಲ್ಲ ಎಂದರೆ ಸಾಕ್ಷಿ ಒಂದೇ ಮನೆಯಲ್ಲಿ ಒಬ್ಬರು ಈ ಕಡೆಗೆ, ಇನ್ನೊಬ್ಬರು ಆ ಕಡೆಗೆ ಇರಬೇಕೆಂದು ಬೇರೆ ಬೇರೆಯಾಗಿ ಮಾತ್ರ ವಾಸಿಸುತ್ತಿದ್ದರು ಎಂದು ನುಡಿಯುತ್ತಾರೆ. ನಿಮ್ಮ ತಂದೆಯನ್ನುನ್ಯಾಯಾಲಯಕ್ಕೆ ತಂದು ಹಾಜರುಪಡಿಸಿದರೇ ಹಾಗೂ ಈ ಪ್ರಕರಣದಲ್ಲಿ ಅವರನ್ನು ಪಕ್ಷಗಾರರನ್ನಾಗಿ ಮಾಡಿದರೆ ನಿಜಾಂಶಗಳನ್ನು ಅವರು ಹೇಳುತ್ತಾರೆ ಎಂದು ನಾನು ಉದ್ದೇಶಪೂರ್ವಕವಾಗಿ ನಾನು ಅವರನ್ನು ನ್ಯಾಯಾಲಯದ ಮುಂದೆ ತರುತ್ತಿಲ್ಲ ಎಂದರೆ ಸಾಕ್ಷಿ ನಾನು ಚಿಕ್ಕವನಿದ್ದಾಗಲೇ ಅವರು ಆಗಾಗ ಮನೆ ಬಿಟ್ಟು ಹೊಗುತ್ತಿದ್ದು, 6 ತಿಂಗಳಿಗೊಮ್ಮೆ 2-3 ವರ್ಷಗಳಿಗೊಮ್ಮೆ ಮಾತ್ರ ಮನೆಗೆ ಬರುತ್ತಿದ್ದರು, ಇತ್ತೀಚೆಗಂತು ಅವರು ಸಿಕ್ಕಿರುವುದಿಲ್ಲ, ಹೀಗಾಗಿ ಅವರನ್ನು ಹಾಜರುಪಡಿಸುವ ಪ್ರಶ್ನೆಯೇ ಇರುವುದಿಲ್ಲವೆಂದು ನುಡಿಯುತ್ತಾರೆ.

ನಿಪಿ.11 ರ ದಾಖಲಾತಿಯನ್ನು ನೀವು ಓದಿ ನೋಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ದಾವಾ ಶೆಡ್ಯೂಲ್ 2 ಮತ್ತು 3 ರ ಅಸ್ತಿಗಳನ್ನು ನನ್ನ ದೊಡ್ಡಪ್ಪ ಮತ್ತು

ಚಿಕ್ಕಪ್ಪಂದಿರು 2003ನೇ ಇಸವಿಯಲ್ಲಿ ಸರ್ಕಾರಕ್ಕೆ ಅರ್ಜಿ ಕೊಟ್ಟು ಮಂಜೂರು ಮಾಡಿಸಿಕೊಂಡಂತಹ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ 2 ಮತ್ತು 3 ರ ಅಸ್ತಿಗಳು ನನ್ನ ಅಜ್ಜ ಮಾದಪ್ಪನ ಆಸ್ತಿಗಳಲ್ಲ ಎಂದರೆ ಗೊತ್ತಿಲ್ಲ. ದಾವಾ ಶೆಡ್ಯೂಲ್ ನಲ್ಲಿ 4 ಮನೆಗಳು ಎಂದು ಹೇಳಿರುತ್ತೀರಿ, ಅವುಗಳ ನಂಬರ್ ಹಾಗೂ ಅವು ಯಾರ ಹೆಸರಿನಲ್ಲಿ ಇವೆ ಎಂದು ಹೇಳಬಹುದಾ ಎಂದರೆ ಸಾಕ್ಷಿ ನನಗೆ ಯಾವುದೂ ಸಹಾ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಪಾಲು ಪಟ್ಟಿಯ ಆಧಾರದ ಮೇಲೆ ನನ್ನ ಹೆಸರಿಗೆ ಖಾತೆ ಮಾಡಿಕೊಡಿ ಎಂದುನಿಮ್ಮ ತಂದೆ ಏನಾದರೂ ಅರ್ಜಿ ಕೊಟ್ಟ ಬಗ್ಗೆ ನಿಮಗೆ ಗೊತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈಗಲೂ ಸಹಾ ನನ್ನ ತಂದೆ ನಮಗೆ ಕೊಟ್ಟಂತಹ ಮನೆಯಲ್ಲಿ ಬಂದು ಉಳಿದುಕೊಂಡು ಅವರ ಪಾಲಿಗೆ ಬಂದ ಜಮೀನನ್ನು ನೋಡಿಕೊಂಡು ಹೋಗೇತ್ತಾರೆ ಎಂದರೆ ಗೊತ್ತಿಲ್ಲ. ನನ್ನ ತಂದೆ ಅವರ ಪಾಲಿಗೆ ಬಂದ ಜಮೀನಿನ ಉತ್ಪನ್ನವನ್ನು ಈಗಲೂ ಸಹಾ ಊರಿಗೆ ಬಂದು ತೆಗೆದುಕೊಂಡು ಹೋಗುತ್ತಾರೆ ಎಂದರೆ ಗೊತ್ತಿಲ್ಲ. ನನಗೆ ಮಾಯಗೌಡನಹಳ್ಳಿಯ ಬಗ್ಗೆಯಾಗಲೀ ಅಥವಾ ನನ್ನ ಅಜ್ಜನ ಆಸ್ತಿಗಳ ಬಗ್ಗೆಯಾಗಲೀ ಮತ್ತು ಪಾಲು ವಿಭಾಗದ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರೂ ಸಹಾ ನ್ಯಾಯಾಲಯಕ್ಕೆ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆ ಸಮಯದಲ್ಲಿ ನಾನು ಮತ್ತು ಪ್ರತಿವಾದಿಯರು ಅವಿಭಕ್ತ ಕಟುಂಬದಗಳಲ್ಲಿ ವಾಸವಾಗಿರಲಿಲ್ಲ, ಹೀಗಾಗಿ ದಾವಾ ಅಸ್ತಿಗಳಲ್ಲಿ ಭಾಗ ಕೊಡುವ ಸಂದರ್ಭ ಇಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜ ಬದುಕಿದ್ದ ಕಾಲದಲ್ಲಿಯೇ ನನ್ನ ತಂದೆಗೆ ಪಾಲು ಕೊಟ್ಟಿದ್ದರಿಂದ ನನಗೆ ದೊಡ್ಡಪ್ಪ ಮತ್ತು ಚಿಕ್ಕಪ್ಪಂದಿರ ಬಳಿ ನಾನು ಪಾಲು ಕೇಳುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜ

ಮಾದಪ್ಪನ ಹಳೆಯ ಮನೆಯಲ್ಲಿ ನಾನು, ನನ್ನ ಚಿಕ್ಕಪ್ಪ ರೇವಣ್ಣ ಮತ್ತು ಅಜ್ಜಿ ವಾಸಿಸುತ್ತಿದ್ದೇವೆ. ನನ್ನ ದೊಡ್ಡಪ್ಪ ಸೋಮಶೇಖರ ಬೇರೆ ಮನೆ ಮಾಡಿಕೊಂಡು ವಾಸವಾಗಿದ್ದಾರೆ ಎಂದರೆ ಹೌದು.

ಮರು ವಿಚಾರಣೆಃ ಇಲ್ಲ

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಇದೆ.

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.